# ಶ್ರೀರಾಮಕೃಷ್ಣರು ಹೇಳಿದ ಕಥೆಗಳು



## ಶಂಖವೂದಿದ ಪದ್ಮಲೋಚನ

ಪದ್ಮಲೋಚನನೆಂಬ ಯುವಕನು ಊರಮಧ್ಯದಲ್ಲಿದ್ದನು
ಗ್ರಾಮ ದೇಗುಲ ಬಿಂಬವಿಲ್ಲದೆ ಮೂಲೆಗುಂಪಾಗಿದ್ದಿತು. ॥ ೧ ॥

ಹಕ್ಕಿ ಹಿಕ್ಕೆಯ ಕಾಡು ಬಲ್ಲೆಯ
ಮುರುಕು ಗೋಡೆಯ ಗುಡಿಯದು
ಪೂಜೆಯಿಲ್ಲದೆ, ಕಸವ ಗುಡಿಸದೆ ಜನರು
ತ್ಯಜಿಸಿದ ಸ್ಥಳವದು. ॥ ೨ ॥

ಒಂದು ಸಾಯಂಕಾಲ ಕೇಳಿತು ಶಂಖ
ವೂದಿದ ಶಬ್ದವು
ದೇವಮಂದಿರದಿಂದ ಕೇಳಲು
ಜನರಿಗಾಯಿತು ಗದ್ದಲ. ॥ ೩ ॥


ಯಾರು ಪೂಜೆಯ ಗೈದರೀದಿನ
ತಂದರೆಲ್ಲಿಂ ಬಿಂಬವ
ಎಂದು ಬಹುಜನರಾಡಿಕೊಂಡರು
ಅರ್ಥವಾಗದೆ ನಾದವ ॥ ೪ ॥

ಒಬ್ಬ ಸಾಹಸಿ ಕದವ ತೆರೆದನು ಇಣುಕಿ
ನೋಡಿದನೊಳಗಡೆ
ಪದ್ಮಲೋಚನ ಶಂಖವೂದುತಲಿದ್ದ
ನೆಲವನು ಗುಡಿಸದೆ ॥ ೫ ॥

ಜರೆದನಾತನ "ಪದ್ಮಲೋಚನ,
ಮೂರ್ಖನೆಂಥವನಾಗಿಹೆ
ಕಸವು ಚೆಲ್ಲಿದೆ, ಬಿಂಬವಿಲ್ಲವು, ಬರಿದೆ
ಶಂಖವನೂದುವೆ. ॥ ೬ ॥

ಸುತ್ತ ಬಾವಲಿ ಹಾರುತಿರುವವು, ಎತ್ತ
ನೋಡಲು ಕಲ್ಮಶ
ಊರ ಜನರನು ಮೋಸಗೊಳಿಸುವೆ,
ಸಾಕು ಮಾಡೀ ಸಾಹಸ." ॥ ೭ ॥

ಕೆಲವು ಮೂರ್ಖರು ಸಭೆಯ ಕರೆವರು
ಭಾರಿ ಭಾಷಣಗೈವರು
ಚಿತ್ತನಿರ್ಮಲವಿರದೆ ಮೋಸದ ಶಂಖವೂದುತಲಿರುವರು. ॥ ೮ ॥



ಕಲೆ : ಪುರುಷೋತ್ತಮ ಕಾರಂತ
ಸಾಹಿತ್ಯ : ಡಾ. ಮಧ್ವ ಶಾಮ ಭಟ್ಟ